<u>ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ</u>

<u>ಸಿ.ಸಿ. ನಂ.**867/2015**</u>

ಪಿರ್ಯಾದುದಾರರುಃ ರಾಜ್ಯದ ಪರವಾಗಿ ಗೋಕಾಕ ಶಹರ ಪೊಲೀಸ್ ಠಾಣೆ,

- ವಿರುದ್ಧ -

ಆರೋಪಿ ನಂ.1: ಸಂಜಯ ಮಲ್ಲಪ್ಪ ಗೌಡರ,
ಸಾಃ ಗಾಂದಿ ಮೈದಾನ, ಗೋಕಾಕ.

# <u>ದೋಷಾರೋಪಣೆ</u>

ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ಪ್ರ.ದ.ನ್ಯಾ. ದಂಡಾಧಿಕಾರಿ ಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ 24-12-2014 ರಂದು ಸಾಯಂಕಾಲ 4.30 ಗಂಟೆ ಸುಮಾರಿಗೆ ಗೋಕಾಕ ಶಹರ ಪೋಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಗೋಕಾಕ ಶಹರದ ಸಂಗೊಳ್ಳಿ ರಾಯಣ್ಣ ಸರ್ಕಲ ಸಮೀಪ ಇರುವ ಶ್ರೀ ಲಕ್ಷ್ಮೀ ಲಾಜದಲ್ಲಿ ಆರೋಪಿಯಾದ ನೀವು ಸದರಿ ಲಾಜ್ ಮಾಲೀಕರಿದ್ದು, ನೀವು ನಿಮ್ಮ ಲಾಜದಲ್ಲಿ ಅಕ್ರಮವಾಗಿ ಹೆಚ್ಚಿನ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಕಾನೂನು ಬಾಹಿರವಾಗಿ ವೇಶ್ಯಾವಾಟಿಕೆ ನಡೆಸಿ ಅದರಿಂದ ಬರುವ ಆದಾಯದಿಂದ ಜೀವನ ನಡೆಸುವ ಸಲುವಾಗಿ ಈ ಪ್ರಕರಣದಿಂದ ವಿಮೋಚನೆಗೊಂಡ ಆರೋಪಿ ನಂ.2 ರವರಿಗೆ ಪ್ರೇರೇಪಿಸಿದ್ದರಿಂದಾ ಸದರಿಯವರು ಚಾಸಾ.10 ರವರಿಗೆ ಲಾಜದ ರೂಮ ನಂ.13 ಕ್ಕೆ ಬರಲು ಹೇಳಿ ಅವಳೊಂದಿಗೆ ರೂಮಿನಲ್ಲಿ ವೇಶ್ಯಾವಾಟಿಕೆಯಲ್ಲಿ ತೊಡಗುವಂತೆ ಮಾಡಿ ಆ ಮೂಲಕ ಆರೋಪಿಯಾದ ನೀವು ಐ.ಟಿ.ಪಿ. ಕಾಯ್ದೆ ಕಲಂ.3, 4, 5 ಮತ್ತು 6 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಮಾಡಿರುವಿರಿ.

ಪ್ರಶ್ನೆಃ1- ಈಗ ಓದಿ ಹೇಳಿದ ದೋಷಾರೋಪನೆ ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ2-ಮೇಲ್ಕಂಡ ದೋಷಾರೋಪನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿತರು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ 26.04.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ.)

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**